ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/05/ಇಸಿಎಸ್/01/2012

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು–1
ದಿನಾಂಕ:19–04–2013

ಸುತ್ತೋಲೆ

ವಿಷಯ:2013 ರ ಏಪ್ರಿಲ್/ಮೇ ಸೆಮಿಸ್ಟರ್ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪ್ರಾಚಾರ್ಯರು/ ಮುಖ್ಯ ಅಧೀಕ್ಷಕರು/ಮುಖ್ಯ ವೀಕ್ಷಕರು/ ಉಪಮುಖ್ಯ ಅಧೀಕ್ಷಕರು ಅನುಸರಿಸಬೇಕಾದ ಕ್ರಮಗಳ ಬಗ್ಗೆ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2013 ರ ಏಪ್ರಿಲ್/ಮೇ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗಳನ್ನು ಸುಗಮವಾಗಿ ನಡೆಸಿ ಸಕಾಲದಲ್ಲಿ ಫಲಿತಾಂಶ ನೀಡಲು ಪರೀಕ್ಷಾ ಕೇಂದ್ರಗಳ ಪ್ರಾಚಾರ್ಯರು/ ಮುಖ್ಯ ಅಧೀಕ್ಷಕರು/ಮುಖ್ಯ ವೀಕ್ಷಕರು/ ಉಪಮುಖ್ಯ ಅಧೀಕ್ಷಕರು ಈ ಕೆಳಕಂಡ ಕ್ರಮಗಳನ್ನು ಅನುಸರಿಸಬೇಕೆಂದು ತಿಳಿಸಲಾಗಿದೆ.

01. ಚುನಾವಣಾ ಕಾರ್ಯನಿಮಿತ್ತ ಸಿಬ್ಬಂದಿ ಕೊರತೆಯಿರುವುದರಿಂದ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ನೌಕರರ/ರಕ್ತ ಸಂಬಂಧಿಗಳ ಮಕ್ಕಳು ಪಾಲಿಟೆಕ್ನಿಕ್‌ಗಳಲ್ಲಿ ವ್ಯಾಸಂಗ ಮಾಡುವ ಸಂದರ್ಭಗಳಲ್ಲಿ ಸದರಿ ನೌಕರರು(ಪ್ರಿನ್ಸಿಪಾಲರು ಮತ್ತು ಉಪನ್ಯಾಸಕರುಗಳು) ಪರೀಕ್ಷಾ ಮುಖ್ಯ ಅಧೀಕ್ಷಕರು/ಉಪ ಮುಖ್ಯಅಧೀಕ್ಷಕರು/ಮುಖ್ಯ ವೀಕ್ಷಕರಾಗಿ/ವಿಚಕ್ಷಣಾ ದಳದಲ್ಲಿ ಕಾರ್ಯನಿರ್ವಹಿಸಬಹುದಾಗಿದೆ. ಆದರೆ ಪ್ರಶ್ನೆ ಪತ್ರಿಕೆ ರಚನೆ, ವಿಷಯ ಪರೀಕ್ಷಕರ ಸಮಿತಿ ಸದಸ್ಯತ್ವ, ಮೌಲ್ಯಮಾಪನ ಮತ್ತು ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲು ಅವಕಾಶವಿರುವುದಿಲ್ಲ.

02. ಸಂಸ್ಥೆಯ ಪ್ರಾಂಶುಪಾಲರು ಕಡ್ಡಾಯವಾಗಿ BTELinx Online ಅಪ್ಲಿಕೇಷನ್ ಅನ್ನು ಬಳಸತಕ್ಕದ್ದು ಎಂದು ತಿಳಿಸಲಾಗಿದೆ. ವಿಭಾಗಾಧಿಕಾರಿಗಳು ಮತ್ತು ಕನಿಷ್ಠ ಇಬ್ಬರು ಪರೀಕ್ಷಾ ಕಾರ್ಯ ನಿರ್ವಾಹಕರುಗಳು ಬಿಟಿಇಲಿಂಕ್ಸ್ ಬಳಸಲು ಅಗತ್ಯ ಕ್ರಮಕೈಗೊಳ್ಳುವುದು.

03. 2013 ಏಪ್ರಿಲ್/ಮೇ ಸೆಮಿಸ್ಟರ್ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ಎಲ್ಲಾ ಸಂಸ್ಥೆಗಳಿಗೆ ದಿ:26–04–2013 ಮತ್ತು 27–04–2013 ರಂದು ಕಳುಹಿಸಲಾಗುತ್ತಿದೆ. ಪ್ರಶ್ನೆ ಪತ್ರಿಕೆ ತಲುಪಿದ ನಂತರ ಯಾವುದೇ ಪ್ರಶ್ನೆಪತ್ರಿಕೆಗಳು ಕಡಿಮೆ ಸಂಖ್ಯೆಯಲ್ಲಿ ಪೂರೈಕೆ ಆಗಿದ್ದಲ್ಲಿ ಪ್ರಶ್ನೆ ಪತ್ರಿಕೆ ತಲುಪಿದ ಮೂರು ದಿನಗಳೊಳಗೆ ಸಂಬಂಧಿಸಿದ ಸಂಸ್ಥೆಯ ಹಿರಿಯ ಉಪನ್ಯಾಸಕರು/ಸಿಬ್ಬಂದಿಯವರನ್ನು ಗುರುತು ಮತ್ತು ಸಹಿ ದೃಢೀಕರಣದೊಂದಿಗೆ, ಮಂಡಳಿಗೆ ಕಳುಹಿಸಲು ತಿಳಿಸಲಾಗಿದೆ. ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲ್ಪಟ್ಟ ಸಂಸ್ಥೆಯ ಉಪನ್ಯಾಸಕರು ಚುನಾವಣಾ ಸೆಕ್ಟೋರಲ್ ಅಧಿಕಾರಿ/ಮಾಸ್ಟರ್ ಟ್ರೈನರ್‌ಗಳಾಗಿ ನೇಮಕಗೊಂಡಿದ್ದರೆ ಸಂಸ್ಥೆಯ ಪ್ರಿನ್ಸಿಪಾಲರು ತಕ್ಷಣ ಕಾರ್ಯದರ್ಶಿಯವರ ಅನುಮತಿ ಪಡೆದು ಬದಲಿ ವ್ಯವಸ್ಥೆ ಮಾಡಿಸಿ ಪ್ರಶ್ನೆಪತ್ರಿಕೆಗಳನ್ನು ಖಜಾನೆ/ಪೋಲೀಸ್ ಠಾಣೆಯಲ್ಲಿ ಠೇವಣಿ ಮಾಡಿಸಿ, ಪರೀಕ್ಷಾ ಮುಖ್ಯವೀಕ್ಷಕರು/ಮುಖ್ಯಅಧೀಕ್ಷಕರು/ಉಪ ಮುಖ್ಯಅಧೀಕ್ಷಕರಾಗಿ ಕಾರ್ಯ ನಿರ್ವಹಿಸಲು ಅನುವು ಮಾಡಲು ಸೂಚಿಸಲಾಗಿದೆ.

04. 2013 ಏಪ್ರಿಲ್/ಮೇ ಸೆಮಿಸ್ಟರ್ ಥಿಯರಿ ಪರೀಕ್ಷೆಯ ಮುಖ್ಯ ಅಧೀಕ್ಷಕರು/ಮುಖ್ಯ ವೀಕ್ಷಕರು/ ಉಪಮುಖ್ಯ ಅಧೀಕ್ಷಕರುಗಳ ಪಟ್ಟಿಯನ್ನು ಬಿಟಿಇಲಿಂಕ್ಸ್ ನಲ್ಲಿ ಪ್ರಕಟಿಸಲಾಗಿದ್ದು, ಸಂಬಂಧಿಸಿದ ಸಂಸ್ಥೆಯ ಪ್ರಾಂಶುಪಾಲರು ಸದರಿ ಮಾಹಿತಿಯನ್ನು ಡೌನಲೋಡ್ ಮಾಡಿಕೊಂಡು, ತಮ್ಮ ಸಂಸ್ಥೆಯಿಂದ ಬೇರೆ ಸಂಸ್ಥೆಗೆ ನಿಯೋಜನೆಗೊಂಡ ಸಿಬ್ಬಂದಿಯನ್ನು ಕಾರ್ಯಬಿಡುಗಡೆಗೊಳಿಸಲು ಕ್ರಮಕೈಗೊಳ್ಳುವುದು. ಹಾಗೂ ತಮ್ಮ ಸಂಸ್ಥೆಗೆ ನಿಯೋಜನೆಗೊಂಡ ಸಿಬ್ಬಂದಿಯವರ ವಿವರ ಪಡೆದು ಸವರೆಲ್ಲಿಯವರು ಕಾರ್ಯ ವರದಿಮಾಡಿಕೊಳ್ಳುವಂತೆ ಅಗತ್ಯ ಕ್ರಮ ತೆಗೆದುಕೊಳ್ಳುವುದು.

05. 2013 ಏಪ್ರಿಲ್/ಮೇ ಸೆಮಿಸ್ಟರ್ ಪರೀಕ್ಷೆಯ ಆಂತರಿಕ ಅಂಕಗಳ ಪರಿವೀಕ್ಷಕರುಗಳ ಪಟ್ಟಿಯನ್ನು ಬಿಟಿಇಲಿಂಕ್ಸ್ ನಲ್ಲಿ ಪ್ರಕಟಿಸಲಾಗಿದ್ದು, ಸಂಬಂಧಿಸಿದ ಸಂಸ್ಥೆಯ ಪ್ರಾಂಶುಪಾಲರು ಸದರಿ ಮಾಹಿತಿಯನ್ನು ಡೌನಲೋಡ್ ಮಾಡಿಕೊಂಡು, ತಮ್ಮ ಸಂಸ್ಥೆಯಿಂದ ಬೇರೆ ಸಂಸ್ಥೆಗೆ ನಿಯೋಜನೆಗೊಂಡ ಸಿಬ್ಬಂದಿಯನ್ನು ಕಾರ್ಯಬಿಡುಗಡೆಗೊಳಿಸಲು ಕ್ರಮಕೈಗೊಳ್ಳುವುದು. ಹಾಗೂ

ತಮ್ಮ ಸಂಸ್ಥೆಗೆ ನಿಯೋಜನೆಗೊಂಡ ಸಿಬ್ಬಂದಿಯವರ ವಿವರ ಪಡೆದು, ಸದರಿಯವರು ಕಾರ್ಯ ವರದಿಮಾಡಿಕೊಳ್ಳುವಂತೆ ನೋಡಿಕೊಳ್ಳುವುದು.

06. ಆಂತರಿಕ ಅಂಕಗಳ ಪರಿವೀಕ್ಷಕರು ನಿಗದಿತ ದಿನಾಂಕದೊಳಗೆ (29-04-2013 ರಿಂದ 15-05-2013) ಆಂತರಿಕ ಅಂಕಗಳನ್ನು ಪರಿಶೀಲಿಸುವಂತೆ ಮತ್ತು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಆಗುವಂತೆ ಸಂಬಂಧಿಸಿದ ಸಂಸ್ಥೆಯ ಪ್ರಾಂಶುಪಾಲರು ಅಗತ್ಯ ಕ್ರಮಕೈಗೊಳ್ಳುವುದು.

07. ಪ್ರಾಯೋಗಿಕ ಪರೀಕ್ಷಕರ ಪಟ್ಟಿಯನ್ನು ಬಿಟಿಇಲಿಂಕ್ಸ್ ಆನ್‌ಲೈನ್‌ನಲ್ಲಿ ದಿನಾಂಕ:07-05-2013 ರಂದು ಸಂಸ್ಥೆಗಳಿಗೆ ನೀಡಲಾಗುವುದು. ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳು ತಮ್ಮ ಸಂಸ್ಥೆಯಿಂದ ನಿಯೋಜಿಸಲಾದ ಪರೀಕ್ಷಕರನ್ನು ಕಡ್ಡಾಯವಾಗಿ ಕಾರ್ಯ ವಿಮುಕ್ತಿಗೊಳಿಸಿ ನಿಯೋಜಿಸಲಾದ ಸಂಸ್ಥೆಗೆ ಹಾಜರಾಗುವಂತೆ ತಿಳಿಸಲು ಆದೇಶಿಸಲಾಗಿದೆ. ಹಾಗೂ ತಮ್ಮ ಸಂಸ್ಥೆಗೆ ನಿಯೋಜನೆಗೊಂಡ ಪ್ರಾಯೋಗಿಕ ಪರೀಕ್ಷಕರನ್ನು ಸಂಪರ್ಕಿಸಿ ದಿನಾಂಕ:18-05-2013 ರಿಂದ 28-05-2013 ರೊಳಗೆ ಎಲ್ಲಾ ಪರೀಕ್ಷೆಗಳನ್ನು ನಡೆಸಲು ಕ್ರಮ ಕೈಗೊಳ್ಳುವುದು. ಮೊದಲ ನಾಲ್ಕು ದಿನಗಳಲ್ಲಿ ಅಂತಿಮ ಸೆಮಿಸ್ಟರ್‌ಗಳ ಮತ್ತು ಡಿಸಿಇಟಿ-2013 ಪರೀಕ್ಷೆಗೆ ಹಾಜರಾಗಲಿರುವ ವಿದ್ಯಾರ್ಥಿಗಳ ಪ್ರಾಯೋಗಿಕ ಪರೀಕ್ಷೆಗಳನ್ನು ಆದ್ಯತೆ ಮೇರೆಗೆ ನಡೆಸಲು ಸೂಚಿಸಲಾಗಿದೆ.

08. ಪ್ರಾಯೋಗಿಕ ಪರೀಕ್ಷೆಗಳ ಅಂಕಗಳನ್ನು ಆನ್‌ಲೈನ್‌ನಲ್ಲಿ ಕೀಯಿಂಗ್ ಮಾಡಿಸಲು ಪ್ರಿನ್ಸಿಪಾಲರು ಅಗತ್ಯ ಕ್ರಮಕೈಗೊಳ್ಳುವುದು. ಯಾವುದೇ ಪ್ರಾಯೋಗಿಕ ವಿಷಯದ ಅಂಕಗಳು ಆನ್‌ಲೈನ್‌ನಲ್ಲಿ ಕೀಯಿಂಗ್ ಆಗದಿದ್ದರೆ ಸಂಬಂಧಪಟ್ಟ ಸಂಸ್ಥೆಯ ಪ್ರಿನ್ಸಿಪಾಲರು ಮತ್ತು ಮುಖ್ಯ ಅಧೀಕ್ಷಕರನ್ನು ನೇರ ಹೊಣೆಗಾರರನ್ನಾಗಿಸಲಾಗುವುದು.

09. ಈ ಕೆಳಕಂಡ ಕಾರ್ಯಗಳಿಗೆ ಸಂಬಂಧಿಸಿದಂತೆ ಸಂಪರ್ಕಿಸಬೇಕಾದ ಅಧಿಕಾರಿಗಳ ಮೊಬೈಲ್ ಸಂಖ್ಯೆಗಳನ್ನು ನೀಡಲಾಗಿದೆ. ಅವಶ್ಯ ಕಂಡುಬಂದಲ್ಲಿ ಸದರಿ ಅಧಿಕಾರಿಗಳನ್ನು ಸಂಪರ್ಕಿಸಲು ಸೂಚಿಸಲಾಗಿದೆ.

| ಕ್ರ.ಸಂ. | ಪರೀಕ್ಷಾ ಕಾರ್ಯ | ಅಧಿಕಾರಿಗಳ ಹೆಸರು, ಮೊಬೈಲ್ ಸಂಖ್ಯೆ |
|---|---|---|
| 1 | ಪ್ರಾಯೋಗಿಕ ಪರೀಕ್ಷೆಯ ಪರೀಕ್ಷಕರ ಪಟ್ಟಿ, ಸ್ಪಷ್ಟೀಕರಣ ಹಾಗೂ ಹೆಚ್ಚುವರಿ ಪರೀಕ್ಷಕರ ಬ್ಯಾಚ್‌ಗಳ ಬೇಡಿಕೆ ಬಗ್ಗೆ. (ವಿ.ಸೂ. ಯಾವುದೇ ಪರೀಕ್ಷಕರ ಬದಲಾವಣೆಗಾಗಿ ಸಂಪರ್ಕಿಸಬಾರದೆಂದು ತಿಳಿಸಲಾಗಿದೆ) | ಶ್ರೀಮತಿ ಬಿ.ಆರ್. ರಾಗಿಣಿ<br>ಉಪ ನಿರ್ದೇಶಕರು (ಪರೀಕ್ಷೆ)<br>9449311464<br>ಶ್ರೀಮತಿ ಕೃಷ್ಣವೇಣಿ ಆರ್.ಎನ್<br>ತಾಂತ್ರಿಕ ಸಹಾಯಕರು<br>9019859064 |
| 2 | ಥಿಯರಿ ಪರೀಕ್ಷೆಯ ಮುಖ್ಯ ಅಧೀಕ್ಷಕರು/ ಮುಖ್ಯ ವೀಕ್ಷಕರು/ ಉಪ ಮುಖ್ಯ ಅಧೀಕ್ಷಕರುಗಳ ನೇಮಕ/ಮಾಹಿತಿ ಕುರಿತು | ಶ್ರೀಮತಿ ಕೃಷ್ಣವೇಣಿ ಆರ್.ಎನ್<br>ತಾಂತ್ರಿಕ ಸಹಾಯಕರು<br>9019859064 |
| 3 | ಆಂತರಿಕ ಅಂಕಗಳ ಪರಿಶೀಲನೆ ಮತ್ತು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವ ಕುರಿತು | ಶ್ರೀ ನಾಗೇಶಾಚಾರಿ<br>ಹಿರಿಯ ತಾಂತ್ರಿಕ ಸಹಾಯಕರು<br>9448880862 |

ಕಾರ್ಯದರ್ಶಿ

ಇವರಿಗೆ,
ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಪ್ರಾಂಶುಪಾಲರುಗಳಿಗೆ

ಪ್ರತಿ: (1) ಕಾರ್ಯದರ್ಶಿಯವರ ಆಪ್ತಶಾಖೆ (2) ಇ-ಗವರ್ನೆನ್ಸ್ ವಿಭಾಗ (3) ಕಡತಕ್ಕೆ

ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/05/ಇಸಿಎಸ್(1)/2012

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-1
ದಿನಾಂಕ: 16-04-2013

## ಸುತ್ತೋಲೆ

ವಿಷಯ: 2013 ರ ಏಪ್ರಿಲ್/ಮೇ ಸೆಮಿಸ್ಟರ್ ಪರೀಕ್ಷೆಗೆ ಸಂಬಂಧಿಸಿದಂತೆ ಆಂತರಿಕ ಅಂಕಗಳನ್ನು ಪರಿಶೀಲಿಸಲು ಪರಿವೀಕ್ಷಕರನ್ನು ನೇಮಿಸುವ ಕುರಿತು

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2013 ರ ಏಪ್ರಿಲ್/ಮೇ ಸೆಮಿಸ್ಟರ್ ಪರೀಕ್ಷೆಗೆ ಸಂಬಂಧಿಸಿದಂತೆ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಆಂತರಿಕ ಅಂಕಗಳನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಬಾಹ್ಯ ಪಾಲಿಟೆಕ್ನಿಕ್ ಸಂಸ್ಥೆಯಿಂದ ತಮ್ಮ ಪಾಲಿಟೆಕ್ನಿಕ್‌ಗೆ ನಿಯೋಜಿಸಲ್ಪಟ್ಟ ಮುಖ್ಯ ವೀಕ್ಷಕರು/ಮುಖ್ಯ ಅಧೀಕ್ಷಕರು/ಉಪ ಮುಖ್ಯ ಅಧೀಕ್ಷಕರುಗಳಲ್ಲಿ ಜೇಷ್ಠತೆಯಲ್ಲಿ ಹಿರಿಯರಾದ ಅಧಿಕಾರಿಗಳು ಪರಿಶೀಲಿಸುವರು.

ಆಂತರಿಕ ಅಂಕಗಳ ಪರಿವೀಕ್ಷಕರ ನೇಮಕಾತಿ ಮಾಹಿತಿ BTE Linx ಆನ್‌ಲೈನ್‌ನಲ್ಲಿ (ಸರ್ಕಾರಿ ಸಂಸ್ಥೆಗಳಿಗೂ) ಲಭ್ಯವಿರುತ್ತದೆ. ಆಂತರಿಕ ಅಂಕಗಳ ಪರಿವೀಕ್ಷಕರಿಗೆ ದಿ:29-04-2013 ರಿಂದ 18-05-2013 ರವರೆಗೆ ಥಿಯರಿ ಪರೀಕ್ಷೆಗಳು ನಡೆಯುವ ಅವಧಿಯಲ್ಲಿ ನಿಮ್ಮ ಸಂಸ್ಥೆಯ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪ್ರತಿ ವಿಷಯದ ನೀಲಿ ಪುಸ್ತಕ (Blue Book) ಗಳು, ಆಂತರಿಕ ಅಂಕಗಳ ರಿಜಿಸ್ಟರ್ ಮತ್ತು ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಸಂಬಂಧಪಟ್ಟ ನಮೂನೆಗಳಲ್ಲಿ ಒದಗಿಸುವುದು ಮತ್ತು ಆಂತರಿಕ ಅಂಕಗಳನ್ನು BTE Linx ಅಪ್ಲಿಕೇಷನ್ ಮೂಲಕ ಪರಿವೀಕ್ಷಕರ ಸಮ್ಮುಖದಲ್ಲಿ ಅಪ್‌ಲೋಡ್ ಮಾಡಲು ಸೂಚಿಸಲಾಗಿದೆ.

ಆನ್ ಲೈನ್‌ನಲ್ಲಿ ಆಂತರಿಕ ಅಂಕಗಳನ್ನು ಪ್ರತಿ ಕೋರ್ಸಿನ ಡಿಕ್ಷನರಿಯಂತೆ ಯಶಸ್ವಿಯಾಗಿ ಅಪ್ ಲೋಡ್ ಮಾಡಿದ ತಕ್ಷಣ BTE Linx ನಿಂದ ಒಂದು ಪ್ರಿಂಟ್ ತೆಗೆದು ಆಂತರಿಕ ಅಂಕಗಳ ರಿಜಿಸ್ಟರ್‌ನೊಡನೆ ಮತ್ತೊಮ್ಮೆ ತಾಳೆ ಮಾಡಿ ಪರಿವೀಕ್ಷಕರು ಹಾಗೂ ಪ್ರಾಚಾರ್ಯರು ಪ್ರತಿ ಪುಟದಲ್ಲಿ ಸಹಿ ಮಾಡಿ ವಿದ್ಯಾರ್ಥಿಗಳ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸುವುದು ಮತ್ತು ಅದರ ಪ್ರತಿ ಹಾಗೂ ಚೆಕ್‌ಲಿಸ್ಟ್ ನಮೂನೆಗಳನ್ನು ಮಂಡಳಿಗೆ ಕಳುಹಿಸಿಕೊಡತಕ್ಕದ್ದು. ಸಂಸ್ಥೆಯ ಮೂಲ ಆಂತರಿಕ ಅಂಕಗಳ ರಿಜಿಸ್ಟರ್‌ನಲ್ಲಿನ ಸಂಬಂಧಪಟ್ಟ ಎಲ್ಲಾ ಪುಟಗಳಲ್ಲಿಯೂ ಸಂಬಂಧಪಟ್ಟ ಉಪನ್ಯಾಸಕರು/ವಿಭಾಗಾಧಿಕಾರಿ/ಪ್ರಾಂಶುಪಾಲರು ದೃಢೀಕರಿಸಿರುವುದನ್ನು ಖಾತರಿಪಡಿಸಿಕೊಂಡು ಪರಿವೀಕ್ಷಕರು ಎಲ್ಲಾ ಪುಟಗಳಲ್ಲಿಯೂ ಪೂರ್ಣ ಸಹಿ ಮಾಡತಕ್ಕದ್ದು ಮತ್ತು ಕೊನೆಯ ಪುಟದಲ್ಲಿ ಪೂರ್ಣ ವಿಳಾಸ ನಮೂದಿಸಲು ಸೂಚಿಸಲಾಗಿದೆ.

DCET-2013 ಪರೀಕ್ಷೆಗೆ ಹಾಜರಾಗಲಿಚ್ಛಿಸುವ ವಿದ್ಯಾರ್ಥಿಗಳಿಗೆ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ನೀಡಬೇಕಾಗಿದ್ದು ಆಂತರಿಕ ಅಂಕಗಳನ್ನು ನಿಗಧಿತ ಸಮಯದಲ್ಲಿ ಆನ್ ಲೈನ್ (BTE Linx) ಮೂಲಕ ಅಪ್‌ಲೋಡ್ ಮಾಡದೆ ಫಲಿತಾಂಶ ವಿಳಂಬವಾದರೆ ಹಾಗೂ ಯಾವುದೇ ಲೋಪದೋಷಗಳಿಂದ/ಆಂತರಿಕ ಅಂಕಗಳ ವ್ಯತ್ಯಾಸದಿಂದ ವಿದ್ಯಾರ್ಥಿಗಳಿಗೆ ಫಲಿತಾಂಶದಲ್ಲಿ ತೊಂದರೆಗಳಾದಲ್ಲಿ ಪ್ರಿನ್ಸಿಪಾಲರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು ಎಂದು ಎಚ್ಚರಿಸಲಾಗಿದೆ.

17/4
ಕಾರ್ಯದರ್ಶಿ

ಇವರಿಗೆ,
ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಪ್ರಾಂಶುಪಾಲರುಗಳಿಗೆ

ಪ್ರತಿ: (1) ಕಾರ್ಯದರ್ಶಿಯವರ ಆಪ್ತಶಾಖೆ
(2) ಇ-ಗವರ್ನೆನ್ಸ್ ವಿಭಾಗ
(3) ಕಡತಕ್ಕೆ

## ಚೆಕ್‌ಲಿಸ್ಟ್ ನಮೂನೆ

## ಭರ್ತಿ ಮಾಡಿದ ನಂತರ ಕಾರ್ಯದರ್ಶಿಯವರಿಗೆ ರವಾನಿಸುವುದು

ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿನ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು (IA Marks) ಪರಿಶೀಲಿಸಲು ನಿಯೋಜಿಸಲ್ಪಟ್ಟ ಅಧಿಕಾರಿಗಳು ಗಮನಿಸಬೇಕಾದ ಅಂಶಗಳು(ಚೆಕ್‌ಲಿಸ್ಟ್)

| | ಹೌದು | ಇಲ್ಲ |
|---|---|---|
| 1. ತಾಂತ್ರಿಕ ಪರೀಕ್ಷಾ ಮಂಡಳಿಯ ಆದೇಶದಂತೆ ಈ ಕೆಳಕಂಡಂತೆ ಕಿರುಪರೀಕ್ಷೆಗಳನ್ನು ನಡೆಸಲಾಗಿದೆಯೇ? | | |
| (ಅ) ಮೊದಲನೆಯ ಕಿರುಪರೀಕ್ಷೆ ಸೆಮಿಸ್ಟರ್ ಪ್ರಾರಂಭವಾಗಿ 6 ವಾರ ಮುಗಿಯುತ್ತಿದ್ದಂತೆ ನಡೆದಿರುವುದೇ? | ☐ | ☐ |
| (ಆ) ಎರಡನೇ ಕಿರುಪರೀಕ್ಷೆ ಸೆಮಿಸ್ಟರ್ ಪ್ರಾರಂಭವಾಗಿ 10 ವಾರ ಮುಗಿಯುತ್ತಿದ್ದಂತೆ ನಡೆಸಲಾಗಿದೆಯೇ? | ☐ | ☐ |
| (ಇ) ಮೂರನೇ ಕಿರುಪರೀಕ್ಷೆ ಸೆಮಿಸ್ಟರ್ ಪ್ರಾರಂಭವಾಗಿ 14 ವಾರ ಮುಗಿಯುತ್ತಿದ್ದಂತೆ ನಡೆಸಲಾಗಿದೆಯೇ? | ☐ | ☐ |
| 2. ಎಲ್ಲಾ ಕಿರುಪರೀಕ್ಷೆಗಳ ವೇಳಾ ಪಟ್ಟಿಗಳನ್ನು ವಿದ್ಯಾರ್ಥಿಗಳ ಗಮನಕ್ಕೆ ತರಲಾಗಿದೆಯೇ? | ☐ | ☐ |
| 3. ಸೂಚನಾ ಫಲಕದಲ್ಲಿ ಕಿರುಪರೀಕ್ಷೆಗಳ ವೇಳಾ ಪಟ್ಟಿಗಳನ್ನು ಪ್ರಕಟಿಸಲಾಗಿದೆಯೇ? | ☐ | ☐ |
| 4. ಪಠ್ಯಕ್ರಮದಲ್ಲಿ ನಿಗಧಿಪಡಿಸಿದಂತೆ ಪ್ರತಿ ಕಿರುಪರೀಕ್ಷೆ ನಡೆಸುವಾಗ ಅದರಲ್ಲಿ ನಿಗಧಿಪಡಿಸಿರುವಂತೆ ಪಾಠ ಪ್ರವಚನಗಳನ್ನು ಮುಗಿಸಿರುವರೆ? | ☐ | ☐ |
| 5. ವಿದ್ಯಾರ್ಥಿಗಳು ಕಿರುಪರೀಕ್ಷೆ ಬರೆಯಲು ಬ್ಲೂ ಬುಕ್ ಇಟ್ಟಿರುವರೆ? | ☐ | ☐ |
| 6. ಕಿರುಪರೀಕ್ಷೆಯ ಅಂಕಗಳನ್ನು ಕ್ರೋಡೀಕೃತ ಆಂತರಿಕ ಅಂಕಗಳ ವಹಿಯಲ್ಲಿ (Consolidated IA Register ನಲ್ಲಿ) ಭರ್ತಿ ಮಾಡಲಾಗಿದೆಯೇ? | ☐ | ☐ |
| 7. ಅಂತಿಮವಾಗಿ ಆಂತರಿಕ ಅಂಕಗಳನ್ನು ನೀಡುವಾಗ ಎರಡು ಕಿರುಪರೀಕ್ಷೆಗಳ ಗರಿಷ್ಠ ಅಂಕಗಳನ್ನು ಪರಿಗಣಿಸಲಾಗಿದೆಯೇ? | ☐ | ☐ |
| 8. ಅಂತರಿಕ ಅಂಕಗಳಲ್ಲಿ 5 ಅಂಕಗಳ ಮಾನದಂಡ ಅನುಸರಿಸಿ ವಿದ್ಯಾರ್ಥಿಗಳ ಹಾಜರಾತಿಗೆ ಅಂಕಗಳನ್ನು ನೀಡಲಾಗಿದೆಯೇ? | ☐ | ☐ |
| 9. ರೆಗ್ಯುಲರ್ ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಹಾಜರಾತಿಯ ಅಂಕಗಳನ್ನು ಈ ಕೆಳಕಂಡಂತೆ ನೀಡಲಾಗಿದೆಯೇ? (9 Sereis ಪಠ್ಯಕ್ರಮದವರಿಗೆ) | | |
| ಹಾಜರಾತಿ ಶೇಕಡ 60 ರಿಂದ ಶೇ. 75 ರವರೆಗೆ 2 ಅಂಕಗಳು | ☐ | ☐ |
| ಹಾಜರಾತಿ ಶೇಕಡ > 75 ರಿಂದ ಶೇ.85 ರವರೆಗೆ 3 ಅಂಕಗಳು | ☐ | ☐ |
| ಹಾಜರಾತಿ ಶೇಕಡ > 85 ರಿಂದ ಶೇ.95 ರವರೆಗೆ 4 ಅಂಕಗಳು | ☐ | ☐ |
| ಹಾಜರಾತಿ ಶೇಕಡ >95 ರಿಂದ ಶೇ.100 ರವರೆಗೆ 5 ಅಂಕಗಳು | ☐ | ☐ |
| 10. ಬಾಹ್ಯ ಡಿಪ್ಲೋಮಾ ಮತ್ತು ಬಾಹ್ಯ ಜೆ.ಓ.ಸಿ. ಅಭ್ಯರ್ಥಿಗಳ ಪ್ರಾಯೋಗಿಕ ವಿಷಯಗಳಿಗೆ ಹಾಜರಾತಿಯ ಅಂಕಗಳನ್ನು ಪ್ರಾಯೋಗಿಕ ತರಬೇತಿ ಹಾಜರಾತಿಯ ಆಧಾರದಲ್ಲಿ ಕ್ರ.ಸಂ. 9 ರ ಮಾನದಂಡ ಅನುಸರಿಸಿ ಅಂಕಗಳನ್ನು ನೀಡಲಾಗಿದೆಯೇ? | ☐ | ☐ |

11. ಬಾಹ್ಯ ಡಿಪ್ಲೋಮಾ ಅಭ್ಯರ್ಥಿಗಳ ಥಿಯರಿ ವಿಷಯಗಳಿಗೆ ಹಾಗೂ ಬಾಹ್ಯ ಜೆ.ಓ.ಸಿ. ಅಭ್ಯರ್ಥಿಗಳು ಮತ್ತು ಲ್ಯಾಟರಲ್ ಎಂಟ್ರಿ ಮೂಲಕ 3 ನೇ ಸೆಮಿಸ್ಟರ್ ಪ್ರವೇಶ ಪಡೆದಿರುವ ಐ.ಟಿ.ಐ. ವಿದ್ಯಾರ್ಥಿಗಳು ತೆಗೆದುಕೊಳ್ಳುವ ಹೆಚ್ಚುವರಿ ಥಿಯರಿ ವಿಷಯಗಳಿಗೆ ಮಾತ್ರ ಅನ್ವಯವಾಗುವಂತೆ ಹಾಜರಾತಿಯ 5ಅಂಕಗಳನ್ನು ಈ ಕೆಳಕಂಡಂತೆ ನೀಡಲಾಗಿದೆಯೇ?
(ಎಲ್ಲಾ ಕಿರು ಪರೀಕ್ಷೆಗಳಿಗೆ ಗೈರುಹಾಜರಾದಲ್ಲಿ ಸಂಬಂಧಿಸಿದ ಸೆಮಿಸ್ಟರ್ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅನರ್ಹರು)

ಒಂದು ಟೆಸ್ಟ್‌ಗೆ ಹಾಜರಾದರೆ 2 ಅಂಕಗಳು ☐ ☐

ಎರಡು ಟೆಸ್ಟ್‌ಗಳಿಗೆ ಹಾಜರಾದರೆ 3 ಅಂಕಗಳು ☐ ☐

ಮೂರೂ ಟೆಸ್ಟ್‌ಗಳಿಗೆ ಹಾಜರಾದರೆ 5 ಅಂಕಗಳು ☐ ☐

12. ವಿದ್ಯಾರ್ಥಿಗಳ ಹಾಜರಾತಿ ಪುಸ್ತಕ ಹಾಗೂ ಕ್ರೋಡೀಕೃತ ಹಾಜರಾತಿ ಪುಸ್ತಕ ಪ್ರತಿ ವಿಭಾಗದಲ್ಲಿ ಇರುವುದೇ? ☐ ☐

13. ಪ್ರತಿ ವಿದ್ಯಾರ್ಥಿಗಳ ಹಾಜರಾತಿಯನ್ನು ಹಾಜರಾತಿ ಪುಸ್ತಕದಲ್ಲಿ ಭರ್ತಿ ಮಾಡಿರುವರೆ? ☐ ☐

14. ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಸಂಬಂಧಪಟ್ಟ ಕ್ರೋಡೀಕೃತ ಪುಸ್ತಕದಲ್ಲಿ ಭರ್ತಿ ಮಾಡಿ ಎಲ್ಲಾ ಪುಟಗಳಲ್ಲಿ ಸಂಬಂಧಪಟ್ಟ ಉಪನ್ಯಾಸಕರು, ವಿಭಾಗಾಧಿಕಾರಿಗಳು ಮತ್ತು ಪ್ರಾಂಶುಪಾಲರು ಸಹಿ ಮಾಡಿರುವರೇ? ☐ ☐

15. ವಿದ್ಯಾರ್ಥಿಗಳ ಪ್ರಾಯೋಗಿಕ ವಿಷಯಗಳ ರೆಕಾರ್ಡ್‌ಗಳ ಮೌಲ್ಯಮಾಪನವಾಗಿದೆಯೇ? ☐ ☐

16. ಪ್ರಾಯೋಗಿಕ ವಿಷಯಗಳಲ್ಲಿ 10 ಆಂತರಿಕ ಅಂಕಗಳನ್ನು ನೀಡಲು ಎರಡು ಕಿರುಪರೀಕ್ಷೆಗಳನ್ನು ನಡೆಸಲಾಗಿದೆಯೇ? ☐ ☐

17. ಸರ್ಕಾರಿ ಆದೇಶದಂತೆ ಅವುಗಳ ಮೌಲ್ಯಮಾಪನವಾಗಿದೆಯೇ? ☐ ☐

18. ವಿದ್ಯಾರ್ಥಿಗಳ ಹಾಜರಾತಿ ಪುಸ್ತಕ(ಕ್ರೋಡೀಕೃತ ಕೂಡ) ಮತ್ತು ಅಂತರಿಕ ಅಂಕಗಳ ರಿಜಿಸ್ಟರ್‌ಗಳಲ್ಲಿ ವಿದ್ಯಾರ್ಥಿಗಳ ಸಹಿ ಪಡೆಯಲಾಗಿದೆಯೇ? ☐ ☐

19. ಎಲ್ಲಾ ಕೋರ್ಸುಗಳ ಆಂತರಿಕ ಅಂಕಗಳನ್ನು BTE Linx ಆನ್ ಲೈನ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆಯೇ? ☐ ☐

20. ಪರೀಕ್ಷಾ ಶುಲ್ಕ ಪಾವತಿಸದೇ ಇರುವ ವಿದ್ಯಾರ್ಥಿಗಳ ಹೆಸರುಗಳನ್ನು ಕ್ಯಾಂಡಿಡೇಟ್ ಲಿಸ್ಟ್‌ನಿಂದ ತೆಗೆದುಹಾಕಲಾಗಿದೆಯೇ? ☐ ☐

21. ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದ ತಕ್ಷಣ BTE Linx ನಿಂದ ಒಂದು ಪ್ರಿಂಟ್ ತೆಗೆದು ಸಂಸ್ಥೆಯಲ್ಲಿ ಆಂತರಿಕ ಅಂಕಗಳ ವಹಿಯೊಡನೆ ತಾಳೆ ಮಾಡಿ ನಂತರ ಪರಿವೀಕ್ಷಕರು ಮತ್ತು ಪ್ರಾಚಾರ್ಯರು ಸಹಿ ಮಾಡಿ ವಿದ್ಯಾರ್ಥಿಗಳ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆಯೇ? ☐ ☐

22. ಪರಿವೀಕ್ಷಕರು ಆಂತರಿಕ ಅಂಕಗಳ ರಿಜಿಸ್ಟರ್‌ನಲ್ಲಿ ಸಂಬಂಧಪಟ್ಟ ಎಲ್ಲಾ ಪುಟಗಳಲ್ಲಿ ಪೂರ್ಣ ಸಹಿ ಮಾಡಿ ಕೊನೆಯ ಪುಟದಲ್ಲಿ ವಿಳಾಸ ನಮೂದಿಸಿರುವರೇ? ☐ ☐

23. ಪರಿವೀಕ್ಷಕರ ಷರಾ (ಏನಾದರೂ ಇದ್ದಲ್ಲಿ)

ಪ್ರಾಂಶುಪಾಲರ ಸಹಿ

ಪರಿವೀಕ್ಷಕರ ಸಹಿ

ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/05/ಇಸಿಎಸ್/01/2012

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-1
ದಿನಾಂಕ:16-04-2013

## ಜ್ಞಾಪನ

ವಿಷಯ:2013 ರ ಏಪ್ರಿಲ್/ಮೇ ಸೆಮಿಸ್ಟರ್ ಥಿಯರಿ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ನೋಡಲ್ ಕೇಂದ್ರಗಳಿಗೆ ಸಾಗಿಸಲು ಅಧಿಕಾರಿಗಳನ್ನು ನಿಯೋಜಿಸುವುದರ ಕುರಿತು.

************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2013 ರ ಏಪ್ರಿಲ್/ಮೇ ಸೆಮಿಸ್ಟರ್ ಥಿಯರಿ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ರಾಜ್ಯದ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಕಳುಹಿಸಬೇಕಾಗಿರುತ್ತದೆ. ಈ ಕಾರ್ಯಕ್ಕೆ ವಿವಿಧ ಪಾಲಿಟೆಕ್ನಿಕ್‌ಗಳ ಈ ಕೆಳಕಂಡ ಉಪನ್ಯಾಸಕರುಗಳನ್ನು ರೂಟ್ ಅಧಿಕಾರಿಗಳನ್ನಾಗಿ ನಿಯೋಜಿಸಲಾಗಿದೆ. ಸದರಿ ಅಧಿಕಾರಿಗಳು ತಮ್ಮ ಮಾರ್ಗದಲ್ಲಿ ತಿಳಿಸಿರುವ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ಶಸ್ತ್ರಧಾರಿ ಪೊಲೀಸ್ ಕಾವಲಿನೊಂದಿಗೆ ವ್ಯವಸ್ಥಿತವಾಗಿ ತಲುಪಿಸಿ ಪರೀಕ್ಷೆಗಳನ್ನು ಸುಗಮವಾಗಿ ನಡೆಸಲು ಕ್ರಮ ಕೈಗೊಳ್ಳಬೇಕಾಗಿ ತಿಳಿಸಲಾಗಿದೆ.

| ಕ್ರ. ಸಂ. | ಮಾರ್ಗಗಳ ವಿವರ | ರೂಟ್ ಅಧಿಕಾರಿಯ ಹೆಸರು ಪಾಲಿಟೆಕ್ನಿಕ್ ವಿಳಾಸ ಮತ್ತು ಮೊಬೈಲ್ ಸಂಖ್ಯೆ | ನಿರ್ದೇಶನಾಲಯ ಬೆಂಗಳೂರು ಇಲ್ಲಿ ವರದಿ ಮಾಡಿಕೊಳ್ಳಬೇಕಾದ ದಿನಾಂಕ |
|---|---|---|---|
| 1 | ಮಾರ್ಗ-1 ಬೆಂಗಳೂರು-ಬೀದರ್ (ರಾಯಚೂರು, ಗುಲ್ಬರ್ಗಾ) | ಪ್ರಕಾಶ್.ವಿ ಪಾಟೀಲ್ ಹಿ.ಉ/ಸಿವಿಲ್, ಸರ್ಕಾರಿ ಪಾಲಿಟೆಕ್ನಿಕ್, ಗುಲ್ಬರ್ಗಾ 9448732579 | 26-04-2013 |
| 2 | ಮಾರ್ಗ-2 ಬೆಂಗಳೂರು-ಬಿಜಾಪುರ (ಬಳ್ಳಾರಿ, ಕೊಪ್ಪಳ, ಕುಷ್ಟಗಿ, ಹುನಗುಂದ, ಗುಳೇದಗುಡ್ಡ, ಬಾಗಲಕೋಟೆ, ಅಥಣಿ) | ಆರ್.ಬಿ.ತಾಳಿಕೋಟಿ, ಉ/ಸಿವಿಲ್, ಸರ್ಕಾರಿ ಪಾಲಿಟೆಕ್ನಿಕ್, ಬಿಜಾಪುರ 9008807319 | 26-04-2013 |
| 3 | ಮಾರ್ಗ-3 ಬೆಂಗಳೂರು-ಬೆಳಗಾಂ (ಚಿತ್ರದುರ್ಗ, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಹಾವೇರಿ, ಗದಗ) | ಎಂ.ಎ.ಗೋವೆ, ಹಿ.ಶ್ರೇ.ಉ/ಆಟೋ, ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾಂ 9449644481 | 26-04-2013 |
| 4 | ಮಾರ್ಗ-4 ಬೆಂಗಳೂರು-ಕಾರವಾರ (ತುಮಕೂರು, ಭದ್ರಾವತಿ, ಶಿವಮೊಗ್ಗ, ಸಾಗರ, ಸಿರ್ಸಿ, ಕುಮಟ) | ಜಿ.ಎಸ್.ಹೆಲವಿ ಉ/ಸಿಪಿ, ಸರ್ಕಾರಿ ಪಾಲಿಟೆಕ್ನಿಕ್,ಕಾರವಾರ 9449992321 | 26-04-2013 |
| 5 | ಮಾರ್ಗ-5 ಬೆಂಗಳೂರು-ಉಡುಪಿ (ಹಾಸನ, ಚಿಕ್ಕಮಗಳೂರು, ಮಂಗಳೂರು) | ರಮಾನಂದನಾಯಕ್.ಡಿ ಆ.ಶ್ರೇ.ಉ/ಕೆಮಿಕಲ್ ಕರ್ನಾಟಕ ಪಾಲಿಟೆಕ್ನಿಕ್, ಮಂಗಳೂರು 9449075012 | 27-04-2013 |
| 6 | ಮಾರ್ಗ-6 ಬೆಂಗಳೂರು-ಕುಶಾಲನಗರ (ರಾಮನಗರ, ಚನ್ನಪಟ್ಟಣ, ಕೆ.ಆರ್.ಪೇಟೆ, ಮೈಸೂರು) | ಬಸವರಾಜು.ಎಂ ಆ.ಶ್ರೇ.ಉ/ಇ&ಸಿ, ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್, ಮೈಸೂರು 9964155456 | 27-04-2013 |
| 7 | ಮಾರ್ಗ-7 ಬೆಂಗಳೂರು-ಚಿಂತಾಮಣಿ-ಕೆಜಿಎಫ್ | ಕೆ.ಬಾಲಚಂದ್ರಾಧರ, ಉ/ಆಟೋ, ಸರ್ಕಾರಿ ಪಾಲಿಟೆಕ್ನಿಕ್, ಬಾಗೇಪಲ್ಲಿ 9611418655 | 27-04-2013 |

ಕಾರ್ಯದರ್ಶಿ

ಇವರಿಗೆ,
ಮೇಲ್ಕಂಡ ಅಧಿಕಾರಿಗಳಿಗೆ-ಸೂಕ್ತ ಕ್ರಮಕ್ಕಾಗಿ
ಪ್ರತಿ: 1.ಸಂಬಂಧಪಟ್ಟ ಪ್ರಾಚಾರ್ಯರುಗಳಿಗೆ – ಸೂಕ್ತ ಕ್ರಮಕ್ಕಾಗಿ
2.ಕಾರ್ಯದರ್ಶಿಯವರ ಆಪ್ತಶಾಖೆ